**ಓ.ಎಸ್. ನಂ. 434/2013 ಪಿ.ಡಬ್ಲೂ-1 ಹೆಸರು - ಚಿಕ್ಕಮ್ಮ**

ಸಾಕ್ಷಿಯನ್ನು ದಿನಾಂಕಃ **06/11/2021** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ. ಜಿ.ಆರ್. ವಕೀಲರಿಂದಃ-

ನಾನು ಮತ್ತು 1 ನೇ ವಾದಿ ನಂಜುಂಡನಾಯಕರ ಮಕ್ಕಳು ಆಗಿರುತ್ತೇವೆ. ನನ್ನ ತಂದೆಯ ಹೆಸರಿನಲ್ಲಿ ದಾವಾ ಆಸ್ತಿಗಳು ಯಾವ ವರ್ಷದಲ್ಲಿ ಖಾತೆ ಆಯಿತು ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಗೆ ಯಾವ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ಸುಳ್ಳು ಪತ್ರವನ್ನು ಸೃಷ್ಟಿಸಿಕೊಂಡಿರುವ ಬಗ್ಗೆ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ದಿನಾಂಕ 01.09.2001 ಪುಟ್ಟಮಾದಮ್ಮ (7 ನೇ ಪ್ರತಿವಾದಿಗೆ) 4 ನೇ ಐಟಂ ಆಸ್ತಿಯನ್ನು ಭೋಗ್ಯ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಭೋಗ್ಯ ಮಾಡಿರುವ ಸಾಲವನ್ನು ತೀರಿಸುವ ಸಲುವಾಗಿ 4 ನೇ ಐಟಂ ಆಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿ ಇನ್ನು ಸ್ವಲ್ಪ ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಭೋಗ್ಯ ಮತ್ತು ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಐಟಂ ಖರೀದಿ ನಂತರ ಈಗ 7 ನೇ ಪ್ರತಿವಾದಿ ಹೆಸರಿಗೆ ಖಾತೆ ಇರುತ್ತದೆ ಎಂದರೆ ಸರಿಯಲ್ಲ. 4 ನೇ ಐಟಂ ಆಸ್ತಿಯಲ್ಲಿ 7 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂಬರ್ 4 ರ ಆರ್.ಟಿ.ಸಿಯಲ್ಲಿ ಕಾಲಂ ನಂಬರ್ 9 ಮತ್ತು 12 ರಲ್ಲಿ 7 ನೇ ಪ್ರತಿವಾದಿ ಯ ಹೆಸರು ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ಖರೀದಿ ಮಾಡಿದ ನಂತರ 4 ನೇ ಐಟಂ ನಂಬರ್ ಆಸ್ತಿಯನ್ನು ಅಭಿವೃದ್ದಿ ಮಾಡಿದ್ದಾರೆ ಎಂದರೆ ಸರಿ, ಆದರೆ ಸುಳ್ಳು ಪತ್ರವನ್ನು ಸೃಷ್ಟಿಸಿಕೊಂಡಿದ್ದಾರೆ 1 ನೇ ವಾದಿ ಮತ್ತು ನನ್ನ ತಂದೆ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರೂ ಅವರು ನನ್ನ ಕಡೆಯಿಂದ ಈ ಸುಳ್ಳು ದಾವೆಯನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. 4 ನೇ ಐಟಂ ಆಸ್ತಿ ಬಿಟ್ಟು ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ನನ್ನ ತಂದೆಗೆ 2 ನೇ ಹೆಂಡತಿ ಇದ್ದು ಅವರ ಮಗಳು 11 ನೇ ಪ್ರತಿವಾದಿ ಇದ್ದು ಅವರಿಗೂ ಕೂಡ ಈ ಆಸ್ತಿಗಳಲ್ಲಿ ಭಾಗ ಬರಬೇಕಾಗಿರುತ್ತದೆ. 7 ನೇ ಪ್ರತಿವಾದಿಗೆ ಮೋಸ ಮಾಡಲು ಈ ಸುಳ್ಳು ದಾವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಓ

ಸಹಿ/-

**1** ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು